# ನವೋದ್ಯಮಿಗಳೊಂದಿಗೆ ಸಂವಾದ

ಮಂಗಳೂರು: ನವೋದ್ಯಮಿಗಳ ಜತೆ ಸಂವಾದ ಹಾಗೂ ಕಾಫಿ ಸಭೆ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಯಿತು.

ಇನ್ನೊವೇಟ್ ಕರ್ನಾಟಕ, ಸ್ಟಾರ್ಟಪ್ ಕರ್ನಾಟಕ, ಕೆ-ಟೆಕ್ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ ಸಮಾರಂಭದಲ್ಲಿ ಸ್ಟಾರ್ಟಪ್ ಕರ್ನಾಟಕದ ಮಾರ್ಕೆಟಿಂಗ್ ಮ್ಯಾನೇಜರ್ ಜೈಕೃಷ್ಣ ರಮೇಶ್, ಅಸೋಸಿಯೇಟ್ ಮಾರ್ಕೆಟಿಂಗ್ ಅಬ್ರಾರ್ ಅಹಮ್ಮದ್ ಪಾಲ್ಗೊಂಡರು.

ಅವರು ನವೋದ್ಯಮದ ಹೊಸ ವ್ಯಾಖ್ಯಾನವನ್ನು ತಿಳಿಸಿ, ಸ್ಟಾರ್ಟಪ್ ಕರ್ನಾಟಕದಲ್ಲಿ ನೀಡಲಾಗುವ ಪ್ರೋತ್ಸಾಹ ಯೋಜನೆಯ ಬಗ್ಗೆ ಮಾಹಿತಿ ನೀಡಿದರು.

ಐಕೆಪಿ ನಾಲೆಜ್ ಪಾರ್ಕ್‌ನ ಕಮ್ಯುನಿಟಿ ಮ್ಯಾನೇಜರ್ ಪ್ರಜ್ವಲ್ ಎಂ. ಮಂಗಳೂರು ಐಕೆಪಿ ನಾಲೆಜ್ ಪಾರ್ಕ್‌ನ ವಿವರವಿತ್ತರು.

ಆರ್‌ಡಿಎಲ್ ಟೆಕ್ನಾಲಜೀಸ್‌ನ ಪ್ರದೀಪ್ ಕುಮಾರ್, ಸ್ಟಾರ್ಟಪ್‌ಗಳು ಹೇಗೆ ಅಭಿವೃದ್ಧಿ ಹೊಂದಬಹುದು ಎನ್ನುವ ಬಗ್ಗೆ ಮಾತನಾಡಿದರು. ವಿದ್ಯಾರ್ಥಿಗಳೊಂದಿಗೆ 46 ನವೋದ್ಯಮಗಳ ಮುಖ್ಯಸ್ಥರು ಸಂವಾದದಲ್ಲಿ ಪಾಲ್ಗೊಂಡರು.



ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇತ್ತೀಚೆಗೆ ನವೋದ್ಯಮಿಗಳ ಸಂವಾದ ಆಯೋಜಿಸಲಾಯಿತು. ಪಾಲ್ಗೊಂಡ ಜೈಕೃಷ್ಣ ರಮೇಶ್, ಅಬ್ರಾರ್ ಅಹಮದ್, ಪ್ರಜ್ವಲ್, ಪ್ರದೀಪ್ ಕುಮಾರ್ ಮತ್ತಿತರರಿದ್ದರು.